ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ಶ್ರೀ. ಎಸ್ ಜಿ ಹೆಚ್ ವಕೀಲರಿಂದ .**

ಸರ್ವೇ ನಂ.32/3 ರ ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ ನಿಡಿ-4 ಎಂದು, ಸರ್ವೇ ನಂ.32/3/ಅ ಇದರ ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-5 ರಿಂದ ನಿಡಿ-9 ಎಂದು, ಡ. ನಂಬರ 282, 315, 335, 1564, 1667, 2082 ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-10 ರಿಂದ ನಿಡಿ-15 ಎಂದು, ಎಮ್ ಆರ್ ನಂ.ಹೆಚ್-5 ರ ದೃಢೀಕೃತ ನಕಲು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-16 ಎಂದು, ಮಾಯಾ ಫಕ್ಕೀರಪ್ಪ ಮಾದರ, ಪಕ್ಕೀರಪ್ಪ ಮಾದರ, ದ್ಯಾವಣ್ಣ ಫಕ್ಕೀರಪ್ಪ, ದುರಗಪ್ಪ ಮಾಯಪ್ಪ ಹರಿಜನ, ಕರಿಯಪ್ಪ ಮಾಯಪ್ಪ, ನೀಲವ್ವ ದುರಗಪ್ಪ ಹರಿಜನ ಇವರುಗಳ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-17 ರಿಂದ ನಿಡಿ-22 ಎಂದು, ಆಸ್ತಿ ನಂ.17, 17 ಎ, 17 ಬಿ, 18 ಇವುಗಳ ಕರಾಕರಣೆಯ ಯಾದಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-23 ರಿಂದ ನಿಡಿ-26 ಎಂದು, 4 ಠರಾವಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-27 ರಿಂದ ನಿಡಿ-30

ಎಂದು, ಭೂಮಿ ಸ್ವೀಕೃತಿ ಅರ್ಜಿಯ ದೃಢೀಕೃತ ನಕಲು, ಚೆಕ್ ಲಿಸ್ಟ್, ಅರ್ಜಿ, ಯು-ನೋಟೀಸು ಹಾಗೂ ಲಗತ್ತು ಕಾಗದ ಪತ್ರ, ಜವಾಬ ಬೇಸ್ಮಿ, ಪಂಚಾಯದಸ್ತ ಇವುಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಒಟ್ಟಾರೆಯಾಗಿ ನಿಡಿ-31 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ವಜಾ ಮಾಡಲು ಪ್ರಾರ್ಥಿಸುತ್ತೇನೆ.

**<u>ಪಾಟೀಸವಾಲುಃ-</u>** ವಾದಿ ಪರ ವಕೀಲರು ಹಾಜರು ಇರುವುದಿಲ್ಲ, ಯಾವುದೇ ಪ್ರತಿನಿಧಿತ್ವ ಇಲ್ಲ, ಪಾಟೀ ಸವಾಲಿಗೆ ಅಂತಿಮ ಮುದ್ದತ್ತು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).